ಮಹಿಳಾದಿನ ವಿಶೇಷ

# ಉಕ್ಕಿನ ಸರಪಳಿ ಜಾಗದಲ್ಲಿ ರೇಷ್ಮೆದಾರದ ಬಿಗಿತ!

**ಮಹಿಳೆಯರ ಬಿಡುಗಡೆಯ ದಾರಿ ಎಂದು ಎರಡು ದಶಕಗಳ ಹಿಂದೆ ಕಾಣುತ್ತಿದ್ದ ಮಾರ್ಗಗಳು ನಿಜವಾಗಿಯೂ ಅವಳನ್ನು ಬಿಡುಗಡೆಗೊಳಿಸಿವೆಯೇ? ಬಿಡುಗಡೆಯ ಭ್ರಮೆಯಲ್ಲಿ ಹೊಸ ಸಂಕೋಲೆಗಳಲ್ಲಿ ಅವಳು ಬಂಧಿತಳಾಗುತ್ತಿದ್ದಾಳೆಯೇ? ಕಳೆದ ಎರಡು ದಶಕಗಳ ಮಹಿಳಾ ನಡಿಗೆಯ ಪ್ರಮುಖ ಸ್ಥಿತ್ಯಂತರಗಳು, ಅವುಗಳ ಪರಿಣಾಮಗಳು ಹಾಗೂ ಮುಂದಿನ ದಾರಿಯ ಸಾಧ್ಯತೆ–ಸವಾಲುಗಳ ಅವಲೋಕನ.**

ಕಳೆದ ಎರಡು ದಶಕಗಳ ಜಗತ್ತು ಹಲವು ಬಗೆಯ ತೀವ್ರರೂಪದ ಜಾಗತಿಕ ಬೆಳವಣಿಗೆಗಳ ಹೆಬ್ಬಾಗಿಲುಗಳ ಮೂಲಕ ಹಾದುಬಂದಿದೆ. ಈ ಬೆಳವಣಿಗೆಗಳನ್ನು ಗಮನಿಸುವ ಮೂಲಕವೇ ಮಹಿಳಾ ಜಗತ್ತಿನಲ್ಲಿ ಆಗಿರುವ ಬದಲಾವಣೆಗಳನ್ನು ಗುರ್ತಿಸಬೇಕಾಗಿದೆ.

1988ರ ನಂತರದ ಭಾರತದ ಮಟ್ಟಿಗೆ ಹೇಳುವುದಾದರೆ, ಒಂದೆಡೆ ಮುಕ್ತ ಮಾರುಕಟ್ಟೆಯ ನೀತಿಗಳಿಗೆ ತೆರೆದುಕೊಂಡ ಆರ್ಥಿಕತೆ ಮತ್ತು ರಾಜಕೀಯ ಚಿತ್ರಣ, ಮತ್ತೊಂದೆಡೆ ದೇಶ ವಿಭಜನೆಯಾದ ಮೇಲಿನ ಸುದೀರ್ಘ ಅಂತರದ ನಂತರ ಮತ್ತೊಮ್ಮೆ ಕೋಮುಪ್ರಚೋದನೆ ನೆಚ್ಚಿಕೊಂಡ ವಿಭಜಕ ಮನಸ್ಥಿತಿಯ ಚುನಾವಣಾ ರಾಜಕಾರಣ – ಈ ಎರಡು ಮುಖ್ಯ ಬೆಳವಣಿಗೆಗಳ ನಡುವೆ ವೇಗದಲ್ಲಿ ಸಾಮಾಜಿಕ, ಸಾಂಸ್ಕೃತಿಕ, ಸಾಮುದಾಯಿಕ ಮೌಲ್ಯಗಳು ಬದಲಾಗುತ್ತಾ ಹೋಗಿವೆ. ಈ ಬದಲಾವಣೆ ತಂದೊಡ್ಡಿದ ಹೊಸ ಸನ್ನಿವೇಶಗಳಲ್ಲಿ ಸಿಲುಕಿದ ಜನಜೀವನ, ಗಂಭೀರವಾದ ಸ್ಥಿತ್ಯಂತರಗಳಿಗೆ ಒಳಗಾಗಿದೆ.

90ರ ದಶಕದ ನಂತರದ ಮುಖ್ಯವಾದ ಕೆಲವು ಸ್ಥಿತ್ಯಂತರಗಳನ್ನು ಮತ್ತು ಹೊಸ ಸವಾಲುಗಳನ್ನು ಹೀಗೆ ಗುರುತಿಸಬಹುದು:



ಮಲ್ಲಿಗೆ

### ಬಂಡವಾಳ ಪ್ರಧಾನ ವ್ಯವಸ್ಥೆ

ಸರ್ಕಾರದ ಸಾರ್ವಜನಿಕ ಹೊಣೆಗಾರಿಕೆಗಳು ಇಳಿಮುಖವಾಗುತ್ತಾ, ಪ್ರಭುತ್ವಗಳ ಪ್ರಧಾನ ಜವಾಬ್ದಾರಿ ಬಂಡವಾಳದ ಪೋಷಣೆ ಎನ್ನುವ ಮನಸ್ಥಿತಿಯನ್ನು ರೂಪುಗೊಳಿಸಲಾಗಿದೆ. ಇದರೊಂದಿಗೆ ಸರ್ಕಾರದ ಜವಾಬ್ದಾರಿಯಾಗಿದ್ದ ಶಿಕ್ಷಣ, ಆರೋಗ್ಯ, ಉದ್ಯೋಗ, ಆಹಾರ, ವಾಸಸ್ಥಳ ಮೊದಲಾದ ಮೂಲಭೂತ ಸವಲತ್ತುಗಳು, ಅವರವರ ಶಕ್ತ್ಯಾನುಸಾರ ದಕ್ಕಿಸಿಕೊಳ್ಳಬೇಕಾದ 'ಸೇವೆ'ಗಳೆಂದೂ, ಅವುಗಳನ್ನು ಖಾಸಗಿ ಪೂರೈಕೆದಾರರು ಸರ್ಕಾರಿ ವ್ಯವಸ್ಥೆಗಿಂತ ಉತ್ತಮವಾಗಿ ಪೂರೈಸಬಲ್ಲರೆಂದು ಜನರನ್ನು ಒಪ್ಪಿಸಲಾಗಿದೆ.

ಇದರೊಂದಿಗೆ ಎಲ್ಲ ಕ್ಷೇತ್ರಗಳಲ್ಲೂ ಖಾಸಗಿ ಬಂಡವಾಳದ ಪಾತ್ರ ಪ್ರಧಾನವಾಗಿದೆ. ಪರಿಣಾಮವಾಗಿ ಜಗತ್ತಿನಾದ್ಯಂತ 'ಲಾಭವೇ ಕೇಂದ್ರ' ಎಂಬ ಆರ್ಥಿಕ ವ್ಯವಸ್ಥೆ ರೂಪುಗೊಂಡಿದೆ. ಅದು ತನ್ನೊಂದಿಗೆ ವ್ಯಕ್ತಿಕೇಂದ್ರಿತ ಮೌಲ್ಯವವಸ್ಥೆಯನ್ನೂ ಹೊತ್ತು ತಂದಿದೆ.

### ಕೊಳ್ಳುಬಾಕ ಸಂಸ್ಕೃತಿಯ ಧಾಂಗುಡಿ

ಕೊಳ್ಳುಬಾಕ ಸಂಸ್ಕೃತಿ ಲಾಭಕೇಂದ್ರಿತ ಅರ್ಥವ್ಯವಸ್ಥೆಯ ಮುಖ್ಯ ಲಕ್ಷಣ. ಇದರ ಭಾಗವಾಗಿ ಎಷ್ಟು ಕೊಂಡರೂ ಮುಗಿಯದ ದಾಹವನ್ನು ಜನರಿಗೆ ಅಂಟಿಸಲಾಯಿತು. ಇದರಿಂದ ಸಣ್ಣ ಆದಾಯದಲ್ಲಿ ಬದುಕು ನಡೆಯಲು ಸಾಧ್ಯವಿಲ್ಲದಂತಾಯಿತು. 'ಸರ್ವೋದಯ'ದ ಆಶಯಗಳಿಗೆ ಎದುರಾಗಿ ಹೊಸ ಬಗೆಯ 'ಅಭಿವೃದ್ಧಿ' ಮಾದರಿಯೊಂದನ್ನು ಸೃಷ್ಟಿಸಲಾಯಿತು. ಈ ಅಭಿವೃದ್ಧಿ ಮಾದರಿಯನ್ನಷ್ಟೇ ಕಂಡಿರುವ 'ಮಿಲೇನಿಯಲ್ಸ್' (2000ನೇ ಇಸವಿಯ ನಂತರ ಹುಟ್ಟಿದ ತಲೆಮಾರು) ಪ್ರಧಾನವಾಗಿರುವ ಮಧ್ಯಮವರ್ಗ, ದೇಶದ ಅಭಿಪ್ರಾಯ ರೂಪಿಸುವ ವರ್ಗವಾಯಿತು. ಹೊಸಬಗೆಯ ದೃಶ್ಯ ಮತ್ತು ಸಾಮಾಜಿಕ ಮಾಧ್ಯಮಗಳು ಇದಕ್ಕೆ ಹೊಸ ವೇದಿಕೆಯಾದವು.

ಜೀವಪರ ಹೋರಾಟಗಳ ಅಮಾನ್ಯೀಕರಣ: ಪ್ರಕೃತಿಯನ್ನೂ ನೈಸರ್ಗಿಕ ಸಂಪನ್ಮೂಲಗಳನ್ನೂ ಲಾಭದ ಗಳಿಕೆಗಾಗಿ ಯದ್ವಾತದ್ವಾ ಬಳಸುವ, ನಾಶಪಡಿಸುವ, ಇಡೀ ಜೀವಜಾಲವನ್ನೇ ಅಸ್ಥಿರಗೊಳಿಸುವ ಬೆಳವಣಿಗೆ ತೀವ್ರವೇಗ ಪಡೆಯಿತು. ಇದೇ ಜಾಗತಿಕರಣದ ನೀತಿಗಳು, ಕೃಷಿ ಹಾಗೂ ಅದರ ಜೊತೆ ಹೊಂದಿಕೊಂಡಂತೆ ಇದ್ದ ಉಪ ಉದ್ಯೋಗಗಳೆಲ್ಲವೂ ನಾಶಗೊಂಡು, ಇಡೀ ವ್ಯವಸಾಯ ಕ್ಷೇತ್ರ ನೆಲಕಚ್ಚುವಂತೆ ಮಾಡಿದವು. ಜಾಗತೀಕರಣದ ಶಕ್ತಿಗಳು ಜನಚಳವಳಿಗಳನ್ನು ವಿಭಜಿಸುವ ತಂತ್ರಗಳನ್ನು ಯಶಸ್ವಿಯಾಗಿ ಪ್ರಯೋಗಿಸಿದ್ದು ಮಾತ್ರವಲ್ಲದೆ ಚಳವಳಿಗಳು ಅಭಿವೃದ್ಧಿಗೆ ಮಾರಕವೆಂದು ದೊಡ್ಡ ಸದ್ದು ಎಬ್ಬಿಸುತ್ತಾ, ಜೀವಪರ ಹೋರಾಟಗಳನ್ನು ಅಮಾನ್ಯಗೊಳಿಸುವ ಕೆಲಸ ನಡೆಯಿತು. ದಲಿತ ದಮನಿತರು, ಮಹಿಳೆಯರು, ಆದಿವಾಸಿಗಳು ಮೊದಲಾದ ಶೋಷಿತ ಸಮುದಾಯಗಳು ತಮ್ಮ ಪಾರಂಪರಿಕ ವೃತ್ತಿ, ವಾಸಸ್ಥಳ ಮತ್ತು ಆದಾಯದ ಮೂಲಗಳನ್ನು ಕಳೆದುಕೊಂಡು, ಮೊದಲಿಗಿಂತ ಹೆಚ್ಚು ಅಭದ್ರತೆ, ಆತಂಕ, ದಬ್ಬಾಳಿಕೆ, ದೌರ್ಜನ್ಯಗಳಿಗೆ ತುತ್ತಾಗಬೇಕಾದ ಸ್ಥಿತಿಗೆ ತಳ್ಳಲ್ಪಟ್ಟವು.

ಈ ಬದಲಾವಣೆಗಳು ಹಲವು ಸವಾಲುಗಳನ್ನು ನಮ್ಮ ಮುಂದೆ ಇಟ್ಟಿವೆ. ಸವಾಲುಗಳ ಜತೆಗೆ ಸಾಧ್ಯತೆಗಳೂ ತೆರೆದುಕೊಂಡಿರುವುದನ್ನು ನಾವು ಪರಿಗಣಿಸಬೇಕು.ಈ ಎಲ್ಲದರ ಪರಿಣಾಮ ಇತರ ಎಲ್ಲ ಸಮುದಾಯಗಳಿಗಿಂತ ಹೆಚ್ಚಾಗಿ ಮಹಿಳಾ ಸಮುದಾಯದ ಮೇಲೆ ಅವರ ದುಡಿಮೆ, ಬದುಕು ಮತ್ತು ಅಸ್ಮಿತೆಯ ಮೇಲೆ ಉಂಟಾಗಿರುವುದರ ಸ್ಪಷ್ಟವಾದ ಅರಿವು ಈಗ